ಗುಬ್ಬಿ ತಾಲ್ಲೂಕು ಭೂಸಾರ ಸಂರಕ್ಷಣ ಇಲಾಖೆಯ ಚಾರ್ಜ್ ಆಫೀಸ್ ಇಲ್ಲದೇ ಇರುವ ಬಗ್ಗೆ

೧೪೨೨(೧೩೩೫)ಶ್ರೀ ಎಸ್. ಶಿವನಂಜಪ್ಪ (ಗುಬ್ಬಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;

ಅ) ಗುಬ್ಬಿ ತಾಲ್ಲೂಕು ಭೂಸಾರ ಸಂರಕ್ಷಣಾ ಇಲಾಖೆಯ ಚಾರ್ಜ್ ಆಫೀಸ್ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಿ. ಎಸ್. ಪುರ ಕೆರೆಯನ್ನು ನೀರಾವರಿ ಅಭಿವೃದ್ಧಿ ಪ್ರದೇಶವನ್ನಾಗಿ ಮಾಡಲು ರೈತರು ಮತ್ತು ಶಾಸಕರು ಒತ್ತಾಯ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅದರ ಮಂಜೂರಾತಿ ಬಗ್ಗೆ ಅಂದಾಜು ಪಟ್ಟಿ ಕಳುಹಿಸಿದ್ದು, ಮಂಜೂರಾತಿ ನೀಡದೇ ಇರುವುದಕ್ಕೆ ಕಾರಣವೇನು;

ಈ) ಹಾಗಾದರೆ ಅದಕ್ಕೆ ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):-

ಅ) ಬಂದಿದೆ, ಆದಾಗ್ಯೂ ಗುಬ್ಬಿ ತಾಲ್ಲೂಕಿನಲ್ಲಿ ತಾತ್ಕಾಲಿಕ ಚಾರ್ಜ್ ಆಫೀಸ್ ಕಾರ್ಯನಿರ್ವಹಿಸುತ್ತಿದೆ.

ಆ) ಇಲ್ಲ.

ಇ) ಈ ಇಲಾಖೆಗೆ ಅಂದಾಜು ಪಟ್ಟಿ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

೧೯೯೨-೯೩ನೇ ಸಾಲಿನಲ್ಲಿ ಪಶುವೈದ್ಯಕೀಯ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ

೧೪೨೪(೧೩೩೪)ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೨-೯೩ರ ಸಾಲಿನಲ್ಲಿ ಎಷ್ಟು ಪಶು ವೈದ್ಯಕೀಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು (ಸ್ಥಳವಾರು ವಿವರ ನೀಡುವುದು);

ಆ) ಈ ಕೇಂದ್ರಗಳನ್ನು ಪ್ರಾಂಭಿಸುವ ಸಂದರ್ಭದಲ್ಲಿ ಕಟ್ಟಡ ಹಾಗೂ ಅದಕ್ಕೆ ಬೇಕಾಗುವ ಸಿಬ್ಬಂದಿಗಳನ್ನು ಒದಗಿಸಲಾಗುವುದೇ

ಶ್ರೀ ಬಸವರಾಜ್ ಪಾಟೀಲ್ (ಪಶು ಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಇನ್ನೂ ನಿರ್ಧರಿಸಬೇಕಾಗಿದೆ

ಆ) ಉದ್ಭವಿಸುವುದಿಲ್ಲ.

ಸ್ಮಶಾನ ಭೂಮಿಗಳ ಅರ್ಜಿ